ಈ ಕೆಳದಿ ಸಂಸ್ಥಾನವನ್ನು ವಿಜಯನಗರ ಆಳ್ವಿಕೆಯ ನಂತರ ಪಾಳೇಗಾರರಾಗಿದ್ದ ಕೆಳದಿ ಅರಸರು ಕಟ್ಟಿದರು. ಇಲ್ಲಿ ಬಹಳ ವೀರರು, ಶೂರರು ಇದ್ದರು. ನ್ಯಾಯ ಧರ್ಮಗಳಿಂದ ಪ್ರಜೆಗಳಿಗೆ ಯಾವುದೇ ಕುಂದು ಕೊರತೆ ಬರದಂತೆ ಆಳುತ್ತಿದ್ದರು. ಈ ರಾಜರುಗಳಲ್ಲಿ ಶಿವಪ್ಪ ನಾಯಕನು ತನ್ನ ಆಳ್ವಿಕೆಯ ಕಾಲದಲ್ಲಿ ಭೂಕಂದಾಯ, ತೆರಿಗೆ ವಸೂಲಿ ಇವುಗಳಲ್ಲಿ ಶಿಸ್ತಿನ ಕ್ರಮ ತಂದನು. ಈತನ ಆಳ್ವಿಕೆಯ ಕಾಲ ಚರಿತ್ರೆಯಲ್ಲಿ ಅಜರಾಮರವಾಗಿದೆ. ಮುಂದೆ ಇಮ್ಮಡಿ ವೆಂಕಟಪ್ಪ ನಾಯಕ, ಭದ್ರಪ್ಪ ನಾಯಕರು ಆಳಿದ ಮೇಲೆ ಅವರ ಹಿರಿಯ ಮಗ ಸೋಮಶೇಖರ ನಾಯಕನು ಪಟ್ಟಕ್ಕೇರಿದನು. ಈತನು ಶತ್ರುಗಳು ಮೋಸದಿಂದ ಅಸುನೀಗಿದಾಗ ಚೆನ್ನಮ್ಮ ಹತಾಶಳಾಗಿ ಕುಳಿತುಕೊಳ್ಳದೆ ಆಡಳಿತದ ಚುಕ್ಕಾಣಿ ಹಿಡಿದಳು. ವೀರ ವನಿತೆ ಎನಿಸಿಕೊಂಡಳು.

**ಸಾರಾಂಶ**

1. ಈ ಸಾಲುಗಳಲ್ಲಿ ಗೆಳೆಯರಾದ ನಿಮಗೆ ಒಂದು ಕಥೆಯನ್ನು ಹೇಳುತ್ತೇನೆ. ಅದು ಕೆಳದಿಯ ಅರಸರ ಕಥೆ ಎಂದು ಪ್ರಾರಂಭಿಸುತ್ತಾರೆ.
2. ಧೀರರು ಹುಟ್ಟಿದ ಈ ಕನ್ನಡ ನಾಡನ್ನು ಅನೇಕ ವೀರ, ಶೂರರು, ಆಳಿದರು, ಅವರಂತೆಯೆ ಬಲದಲ್ಲಿ, ಧೈರ್ಯದಲ್ಲಿ ಈ ಕೆಳದಿಯ ಅರಸರೂ ಸಹ ಕಲಿಗಳಾಗಿದ್ದರು.
3. ಕೆಳದಿಯ ಸಂಸ್ಥಾನವನ್ನು ಚೌಡಪ್ಪ, ಭದ್ರಪ್ಪ ಎಂಬ ವೀರ ನಾಯಕರು ಸ್ಥಾಪಿಸಿದರು. ಇವರು ನಾಗಮುರಿ ಎಂಬ ಒಂದು ಕತ್ತಿ ಅದು ನಾಗರಹಾವಿನಂತೆ ಬಳುಕುವ ಕತ್ತಿ, ಬಳಸುವುದರಲ್ಲಿ ಸುಪ್ರಸಿದ್ಧರು.
4. ಈ ಕೆಳದಿ ಸಂಸ್ಥಾನವನ್ನು ಆಳಿದವರಲ್ಲಿ ಶಿವಪ್ಪನಾಯಕನು ಶ್ರೇಷ್ಠನು. ಅವನ ಕಾಲದಲ್ಲಿ ಭೂಕಂದಾಯ, ತೆರಿಗೆಯ ವಿಷಯಗಳಲ್ಲಿ ಒಂದು ಶಿಸ್ತನ್ನು ತಂದು ಆತನ ಹೆಸರು ಚರಿತ್ರೆಯಲ್ಲಿ ಅಜರಾಮರವಾಗಿ ಉಳಿಯುವಂತೆ ಆಯಿತು.
5. ಸೋಮಶೇಖರ ನಾಯಕನು ಶತ್ರುಗಳಿಂದ ಆಳಿದ ಮೇಲೆ ಧೈರ್ಯಗುಂದದೆ ಚೆನ್ನಮ್ಮಾಜಿ ಅಧಿಕಾರದ ಚುಕ್ಕಾಣಿ ಹಿಡಿದಿದ್ದಾಗ ಛತ್ರಪತಿ ಶಿವಾಜಿಯ ಮಗ ರಕ್ಷಣೆ ಕೋರಿ ಬಂದಾಗ ಒಳಗಿಂದೊಳಗೆ ತನ್ನ ರಾಜಧಾನಿಯನ್ನು ಬೇರೆಡೆಗೆ ಸಾಗಿಸಿ ಬಹಳ ತಂತ್ರೋಪಾಯವನ್ನು ಬಳಸಿ ರಾಜಾರಾಮನನ್ನು ರಕ್ಷಿಸುತ್ತಾಳೆ.
6. ಅವಳ ಆಳ್ವಿಕೆಯಲ್ಲಿ ದಾನಧರ್ಮಗಳು ನಡೆದವು. ಜನರು ಸಜ್ಜನಿಕೆಯಿಂದ ವರ್ತಿಸುತ್ತಿದ್ದರು. ಹೈದರಾಲಿಯ ಸೈನ್ಯದ ಮುಂದೆ ಇವಳ ಬಲ ಸಾಲದಾಗಿ ಇವಳು ಸಾವನಪ್ಪಿದ್ದಳು. ಇದನ್ನು ಕವಿ 'ಕೆಳದಿಯ ಸಿರಿ ನಂದಿತು' ಎಂದು ಹೇಳುತ್ತಾರೆ.

**I. ಪ್ರಶ್ನೋತ್ತರಗಳು .**

**1. ಲಾವಣಿ ಎಂದರೇನು? ವಿವರಿಸಿ.**

ಉ. ಲಾವಣಿ ಎಂದರೆ ಇದೊಂದು ಹಾಡುಗಬ್ಬ, ಕಥನ ಕಾವ್ಯ. ಇಂಗ್ಲೀಷಿನಲ್ಲಿ 'ballad' ಎನ್ನುತ್ತಾರೆ ಇದನ್ನು ಹಾಡುವಾಗ 'ತಮಟೆ' ಎಂಬ ಚರ್ಮವಾದ್ಯವನ್ನು ಬಳಸುತ್ತಾರೆ. ಈ ಗೀತೆಗಳಲ್ಲಿ ಕಥೆ ಇರುತ್ತದೆ. ಹಿಂದಿನ ವೀರರ ವೀರ ಮಹಿಳೆಯ ಜೀವನ ಚರಿತ್ರೆ ಅಥವಾ ಚರಿತ್ರೆಯ ಕಥೆಯನ್ನು ಇದು ಒಳಗೊಂಡಿರುತ್ತದೆ. ಕೆಲವು ವೇಳೆ ಇದು ಬಹಳ ದೀರ್ಘವಾಗಿಯೂ ಇರುತ್ತದೆ.

**ಉದಾ:** ಸಂಗೊಳ್ಳಿರಾಯನ ಕಥೆ, ಚೆನ್ನಮ್ಮನ ಕಥೆ ಮುಂತಾದವು. ವಿಷಯಗಳನ್ನು ಜನಸಾಮಾನ್ಯರಿಗೆ ತಲುಪಿಸುವುದೇ ಲಾವಣಿಗಳ ಮುಖ್ಯ ಉದ್ದೇಶವಾಗಿತ್ತು.

**2. ಕವಿ ಯಾರ ಕಥೆಯನ್ನು ಈ ಲಾವಣಿಯಲ್ಲಿ ಹೇಳುತ್ತಾರೆ? ಅವರು ಎಂಥಹವರು?**

ಉ. ಕವಿ ಕೆಳದಿ ಅರಸರ ಕಥೆಯನ್ನು ಈ ಲಾವಣಿಯಲ್ಲಿ ಹೇಳುತ್ತಾರೆ. ಹಿಂದೆ ಕನ್ನಡ ನಾಡನ್ನು ಅನೇಕ ರಾಜರು ವೈಭವದಿಂದ ಆಳಿದರು. ಅವರೆಲ್ಲರೂ ತಮ್ಮ ಶೌರ್ಯ, ಧೈರ್ಯಗಳಿಗೆ ಪ್ರಸಿದ್ಧರು. ಅಂತಹವರಲ್ಲಿ ಕೆಳದಿಯ

ಅರಸರೇನು ಕಡಿಮೆಯವರಲ್ಲ. ಅವರೂ ಕೂಡ ಶೌರ್ಯ, ಪರಾಕ್ರಮಗಳಿಗೆ ಹೆಸರು ವಾಸಿಯಾಗಿದ್ದರು. ಅಂತಹ ಕೆಳದಿಯ ಅರಸರ ಕಥೆಯನ್ನು ಲಾವಣಿಯಲ್ಲಿ ಹೇಳುತ್ತಾರೆ.

**3. ಕೆಳದಿಯ ಸಂಸ್ಥಾನವನ್ನು ಸ್ಥಾಪಿಸಿದವರು ಯಾರು? ಅವರಲ್ಲಿ ಶಿವಪ್ಪನಾಯಕನ ಹೆಸರು ಏಕೆ ಅಜರಾಮರವಾಗಿದೆ?**

ಉ. ಕೆಳದಿಯ ಸಂಸ್ಥಾನವನ್ನು ಚೌಡಪ್ಪ ಹಾಗೂ ಭದ್ರಪ್ಪ ನಾಯಕರು ಸ್ಥಾಪಿಸಿದರು. ಇವರ ನಂತರ ಆಳಿದ ಶಿವಪ್ಪ ನಾಯಕ ಶಿಸ್ತಿನ ರಾಜನಾಗಿದ್ದ. ಅವನ ಕಾಲದಲ್ಲಿ ಭೂಕಂದಾಯ ಹಾಗೂ ತೆರಿಗೆಯ ವಿಷಯದಲ್ಲಿ ಶಿಸ್ತನ್ನು ತಂದ. ಇವನ ನಿರ್ಧಾರಗಳು ಅವನ ಪ್ರಜಾಪರವಾಗಿದ್ದರಿಂದ, ಅವನು ಎಲ್ಲಾ ಪ್ರಜೆಗಳ ಅಚ್ಚುಮೆಚ್ಚಿನವನಾಗಿ ಅವನ ಹೆಸರು ಚರಿತ್ರೆಯಲ್ಲಿ ಅಜರಾಮರವಾಗಿದೆ.

**4. ಚೆನ್ನಮ್ಮನನ್ನು ರಕ್ಷಣೆ ಕೋರಿ ಬಂದ ರಾಜ ಯಾರು? ಅವನಿಗೆ ಚೆನ್ನಮ್ಮ ಹೇಗೆ ರಕ್ಷಣೆ ನೀಡಿದಳು?**

ಉ. ಚೆನ್ನಮ್ಮನನ್ನು ರಕ್ಷಣೆ ಕೋರಿ ಬಂದವನು ಛತ್ರಪತಿಯ ಮಗ ರಾಜಾರಾಮ. ಒಮ್ಮೆ ಅಭಯವಿತ್ತ ಮೇಲೆ ತಮ್ಮ ಪ್ರಾಣ ಕೊಟ್ಟಾದರೂ ಕಾಪಾಡುವ ಹೊಣೆಯನ್ನು ಹಿಂದಿನ ನಮ್ಮ ರಾಜ ಮನೆತನಗಳು ಪಾಲಿಸಿಕೊಂಡೇ ಬಂದಿದ್ದವು. ಇದಕ್ಕೇನು ಚೆನ್ನಮ್ಮ ಹೊರತಾಗಲಿಲ್ಲ. ಮರಾಠರಿಗೆ ಅಭಯವಿತ್ತ ಇವಳು ಮೊಘಲರನ್ನು ಎದುರು ಹಾಕಿಕೊಳ್ಳಲು ಹಿಂಜರಿಯಲಿಲ್ಲ. 'ಶಕ್ತಿಗಿಂತ ಯುಕ್ತಿ ಮೇಲು' ಎಂಬಂತೆ ಯುಕ್ತಿಯನ್ನು ಬಳಸಿ ಅವರನ್ನು ಹಿಮ್ಮೆಟ್ಟಿಸಿ ರಾಜಾರಾಮನಿಗೆ ರಕ್ಷಣೆ ನೀಡಿದಳು.

**5. ಚೆನ್ನಮ್ಮನ ಅವಸಾನ ಹೇಗಾಯಿತು? ವಿವರಿಸಿ.**

ಉ. ಮರಾಠರಿಗೆ ರಕ್ಷಣೆಯಿತ್ತು, ಮೊಘಲರನ್ನು ಎದುರು ಹಾಕಿಕೊಂಡ ಚೆನ್ನಮ್ಮ ಅವರೊಡನೆ ಯುದ್ಧ ಮಾಡಬೇಕಾಯಿತು. ಒಮ್ಮೆ ಯುಕ್ತಿಯಿಂದ ಸೋಲಿಸಿ ಕಳುಹಿಸಿದರೂ ಮತ್ತೊಮ್ಮೆ ಅವರ ಸೈನ್ಯ ಬಲದ ಮುಂದೆ ಈಕೆಯ ಶಕ್ತಿ ಸಾಲದಾಗಿ ಯುದ್ಧದಲ್ಲಿ ಮಡಿದಳು. ಇದನ್ನು ಕವಿ 'ಕೆಳದಿಯ ಸಿರಿ ನಂದಿತು' ಎಂದು ವಿವರಿಸಿದ್ದಾರೆ.

**II. ಸಂದರ್ಭದೊಡನೆ ವಿವರಿಸಿ.**

**1. "ಶೌರ್ಯದಿ, ಧೈರ್ಯದಿ ಬಲ ವಿಕ್ರಮದಲಿ ಕಲಿಗಳು ಕೆಳದಿಯ ನಾಯಕರು."**

ಉ. ಈ ವಾಕ್ಯವನ್ನು 'ಕೆಳದಿಯ ಅರಸರ ಕಥೆ' ಎಂಬ ಲಾವಣಿಯಿಂದ ಆರಿಸಲಾಗಿದೆ. ಈ ಮಾತನ್ನು ಕವಿ ಸದಾನಂದ ಶರ್ಮಾ ಅವರು ಕೆಳದಿಯ ಅರಸರನ್ನು ಕುರಿತು ಹೇಳಿದ್ದಾರೆ.

ಹಿಂದೆ ಕನ್ನಡ ನಾಡನ್ನು ಅನೇಕ ರಾಜರು ವೈಭವದಿಂದ ಆಳಿದರು. ಅವರೆಲ್ಲರೂ ಅವರ ಶೌರ್ಯ, ಧೈರ್ಯಗಳಿಗೆ ಪ್ರಸಿದ್ಧರು. ಅಂತಹವರಲ್ಲಿ ಕೆಳದಿಯ ಅರಸರೇನು ಕಡಿಮೆಯವರಲ್ಲ. ಕೆಳದಿಯ ಅರಸರೂ ಕೂಡ ಅವರ ಶೌರ್ಯ, ಪರಾಕ್ರಮಗಳಿಗೆ ಹೆಸರು ವಾಸಿಯಾಗಿದ್ದರು.

**2. "ಭಾರತ ಚರಿತ್ರೆಯೊಳು ಸೇರಿಹನು ಶಿಸ್ತಿನ ಶಿವಪ್ಪ ನಾಯಕನು."**

ಉ. ಈ ವಾಕ್ಯವನ್ನು 'ಕೆಳದಿಯ ಅರಸರ ಕಥೆ' ಎಂಬ ಲಾವಣಿಯಿಂದ ಆರಿಸಲಾಗಿದೆ. ಈ ಮಾತನ್ನು ಕವಿ ಬಿ.ಸದಾನಂದಶರ್ಮ ಅವರು ಶಿವಪ್ಪ ನಾಯಕನನ್ನು ಕುರಿತು ಹೇಳಿದ್ದಾರೆ.

ಕೆಳದಿಯ ಸಂಸ್ಥಾನವನ್ನು ಚೌಡಪ್ಪ ಹಾಗೂ ಭದ್ರಪ್ಪ ನಾಯಕರು ಸ್ಥಾಪಿಸಿದರು. ಇವರ ನಂತರ ಆಳಿದ ಶಿವಪ್ಪ ನಾಯಕ ಶಿಸ್ತಿನ ರಾಜನಾಗಿದ್ದ. ಅವನ ಕಾಲದಲ್ಲಿ ಭೂಕಂದಾಯ ಹಾಗೂ ತೆರಿಗೆಯ ವಿಷಯದಲ್ಲಿ ಶಿಸ್ತನ್ನು ತಂದ. ಇವನ ನಿರ್ಧಾರಗಳು ಅವನ ಪ್ರಜಾಪರವಾಗಿದ್ದರಿಂದ ಅವನು ಎಲ್ಲಾ ಪ್ರಜೆಗಳ ಅಚ್ಚುಮೆಚ್ಚಿನವನಾಗಿ ಅವನ ಹೆಸರು ಚರಿತ್ರೆಯಲ್ಲಿ ಅಜರಾಮರವಾಗಿದೆ.

**3. "ಹೈದರಾಲಿಯಾಕ್ರಮಣದಿ ನಂದಿತು ಕೆಳದಿಯ ಸಾಮ್ರಾಜ್ಯ ಸಿರಿ."**

ಉ. ಈ ವಾಕ್ಯವನ್ನು 'ಕೆಳದಿಯ ಅರಸರ ಕಥೆ' ಎಂಬ ಲಾವಣಿಯಿಂದ ಆರಿಸಲಾಗಿದೆ. ಈ ಮಾತನ್ನು ಕವಿ ಬಿ.ಸದಾನಂದಶರ್ಮ ಅವರು ಚೆನ್ನಮ್ಮನನ್ನು ಕುರಿತು ಹೇಳಿದ್ದಾರೆ.

ಮರಾಠರಿಗೆ ರಕ್ಷಣೆಯಿತ್ತು, ಮೊಘಲರನ್ನು ಎದುರು ಹಾಕಿಕೊಂಡ ಚೆನ್ನಮ್ಮ ಅವರೊಡನೆ ಯುದ್ಧ ಮಾಡಬೇಕಾಯಿತು. ಒಮ್ಮೆ ಯುಕ್ತಿಯಿಂದ ಸೋಲಿಸಿ ಕಳುಹಿಸಿದರೂ ಮತ್ತೊಮ್ಮೆ ಅವರ ಸೈನ್ಯ ಬಲದ ಮುಂದೆ ಈಕೆಯ ಶಕ್ತಿ ಸಾಲದಾಗಿ ಯುದ್ಧದಲ್ಲಿ ಮಡಿದಳು. ಇದನ್ನು ಕವಿ 'ಕಿತ್ತೂರಿನ ಸಿರಿ ನಂದಿತು' ಎಂದು ವಿವರಿಸಿದ್ದಾರೆ.

**III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**1. ಕವಿ ಸದಾನಂದ ಶರ್ಮರು ಯಾರ ಕಥೆಯನ್ನು ಹೇಳುವೆನೆಂದರು?**

ಉ. ಕವಿ ಸದಾನಂದ ಶರ್ಮರು 'ಕೆಳದಿಯ ಅರಸರ ಕಥೆಯನ್ನು' ಹೇಳುವೆನೆಂದರು.

**2. ಕೆಳದಿಯ ನಾಯಕರು ಎಂಥಹವರು?**

ಉ. ಶೌರ್ಯ, ಧೈರ್ಯಗಳಿಗೆ ಕಲಿಗಳಾಗಿದ್ದವರು ಕೆಳದಿಯ ನಾಯಕರು ಎಂದು ಕವಿ ಹೇಳಿದ್ದಾರೆ.

**3. ಕೆಳದಿಯ ಸಂಸ್ಥಾನವನ್ನು ಯಾರು ಸ್ಥಾಪಿಸಿದರು?**

ಉ. ಕೆಳದಿಯ ಸಂಸ್ಥಾನವನ್ನು ಚೌಡಪ್ಪ, ಭದ್ರಪ್ಪ ನಾಯಕರು ಸ್ಥಾಪಿಸಿದರು.

**4. ಶಿವಪ್ಪನಾಯಕ ಯಾವ ವಿಷಯದಲ್ಲಿ ಶಿಸ್ತನ್ನು ತಂದನು?**

ಉ. ಭೂಕಂದಾಯ, ತೆರಿಗೆಯ ವಿಷಯದಲ್ಲಿ ಶಿಸ್ತನ್ನು ತಂದನು.

**5. ಚೆನ್ನಮ್ಮನ ರಕ್ಷಣೆ ಕೋರಿ ಬಂದವರು ಯಾರು?**

ಉ. ಛತ್ರಪತಿಯ ಮಗ ರಾಜಾರಾಮನು ಚೆನ್ನಮ್ಮನನ್ನು ರಕ್ಷಣೆ ನೀಡಬೇಕೆಂದು ಕೋರಿದ.

**6. ಕೆಳದಿಯ ಸಾಮ್ರಾಜ್ಯ ಸಿರಿ ಹೇಗೆ ನಂದಿತು?**

ಉ. ಹೈದರಾಲಿಯ ಆಕ್ರಮಣದಿಂದ ಕೆಳದಿಯ ಸಾಮ್ರಾಜ್ಯ ನಂದಿ ಹೋಯಿತು.

**IV. ಪದಗಳ ಅರ್ಥ ತಿಳಿಯಿರಿ.**

1. ಧೀರರು = ವೀರರು
2. ವಿಕ್ರಮ = ಪರಾಕ್ರಮ, ಶೌರ್ಯ
3. ಕಲಿ = ವೀರ
4. ನಾಗಮುರಿ = ಇದೊಂದು ರೀತಿಯ ಆಯುಧ, ನಾಗರಹಾವಿನಂತೆ ಬಳುಕುತ್ತದೆ
5. ಸಜ್ಜನಿಕೆ = ಒಳ್ಳೆಯತನ
6. ವೈರ = ಹಗೆತನ
7. ಪಥ = ದಾರಿ, ಮಾರ್ಗ
8. ಕಾದಳು = ಹೋರಾಡಿದಳು.
9. ಚರಿತ್ರೆ = ಇತಿಹಾಸ
10. ಆಕ್ರಮಣ = ದಾಳಿ

+++++